# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

**ದಿನಾಂಕ: 07.11.2020 ರಂದು ಬೆಳಿಗ್ಗೆ: 11:00 ಗಂಟೆಗೆ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2020-21 ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | **ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು** | ಅಧ್ಯಕ್ಷರು |
| 2. | **ಪ್ರೊ. ಬಿ.ಟಿ. ಸಂಪತ್ ಕುಮಾರ್**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 3. | **ಶ್ರೀ ಶ್ರೀನಿವಾಸ ಆರ್.ಕೆ.**<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು, ತುಮಕೂರು ಜಿ.-572137. | ಸದಸ್ಯರು |
| 4. | **ಪ್ರೊ. ಡಿ.ಎಸ್. ಮುನಿಂದ್ರಕುಮಾರ್,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ. | ಸದಸ್ಯರು |
| 5. | **ಡಾ. ಲೀಲಾವತಿ ಟಿ.ಆರ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು. | ಸದಸ್ಯರು |
| 6. | **ಡಾ. ಬಾಲಪ್ಪ,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ, ತುಮಕೂರು ಜಿಲ್ಲೆ-572129. | ಸದಸ್ಯರು |
| 7. | **ಡಾ. ಪಿ. ರಾಜಾರೆಡ್ಡಿ,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು- 572213 | ಸದಸ್ಯರು |
| 8. | **ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.**<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು-572102. | ಸದಸ್ಯರು |
| 9. | **ಶ್ರೀ ಪ್ರಸನ್ನಕುಮಾರ್**<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-560009. | ಸದಸ್ಯರು |
| 10. | **ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ**<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 11. | **ಶ್ರೀಮತಿ ಎಂ.ಎಸ್. ಭವ್ಯ,**<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್, ಬೆಂಗಳೂರು-560064. | ಸದಸ್ಯರು |
| 12. | **ಶ್ರೀ ರಾಜು**<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ, ತಿಪಟೂರು-572201. ತುಮಕೂರು ಜಿಲ್ಲೆ. | ಸದಸ್ಯರು |
| 13. | **ಶ್ರೀ ಟಿ.ಡಿ. ವಿನಯ್,**<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ, ತುಮಕೂರು-572105. | ಸದಸ್ಯರು |
| 14. | **ಪ್ರೊ. ಪಿ. ಪರಮಶಿವಯ್ಯ,**<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 15. | **ಕುಲಸಚಿವರು (ಪರೀಕ್ಷಾಂಗ)** | ಸದಸ್ಯರು |
| 16. | **ಹಣಕಾಸು ಅಧಿಕಾರಿಗಳು** | ವಿಶೇಷ ಆಹ್ವಾನಿತರು |
| 17. | **ಕುಲಸಚಿವರು** | ಸದಸ್ಯ ಕಾರ್ಯದರ್ಶಿ |

ಹಾಜರಾಗದ ಸದಸ್ಯರು

| | | |
|---|---|---|
| 1 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6 | ಕುಮಾರಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು-560094. | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 07.11.2020ರ ಶನಿವಾರ ಬೆಳಿಗ್ಗೆ: 11.00 ಕ್ಕೆ ನಡೆದ 2020-21 ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕುಲಸಚಿವರು ಸಭೆಯ ಎಲ್ಲಾ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|

- ದಿನಾಂಕ: 25.08.2020 ರಂದು ನಡೆದ 2020-21ನೇ ಸಾಲಿನ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ಬಗ್ಗೆ ಕೈಗೊಂಡಿರುವ ಕಾರ್ಯನಿರ್ವಹಣಾ ವರದಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಸಭೆಯು ನಡಾವಳಿಯನ್ನು ಯಥಾವತ್ತಾಗಿ ದೃಢೀಕರಿಸಿತು.
- ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗುವ ವಿಷಯಗಳ ಕುರಿತು ಕೈಗೊಳ್ಳುವ ಯಾವುದೇ ಕ್ರಮವಾಗಲೀ / ವರದಿಯಾಗಲೀ ಮುಂದೆ ನಡೆಯುವ ಸಿಂಡಿಕೇಟ್ ಸಭೆಯ ಗಮನಕ್ಕೆ ತರಲು ಶ್ರೀ ಟಿ.ಎಸ್. ಸುನಿಲ್‌ಪ್ರಸಾದ್ ಇವರು ಸಭೆಯ ಗಮನಕ್ಕೆ ತಂದಿರುತ್ತಾರೆ.
- ಶ್ರೀ ಸುನಿಲ್ ಪ್ರಸಾದ್, ಶ್ರೀ ಪ್ರಸನ್ನಕುಮಾರ್ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ರವರುಗಳು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಕೋರಿದ್ದ ವಿಷಯಗಳನ್ನು ಸದಸ್ಯರುಗಳು ಸಭೆಯಲ್ಲಿ ಚರ್ಚಿಸಿದರು. ಹಾಗೂ ಇನ್ನುಮುಂದೆ ವಿಷಯಗಳನ್ನು ಸಭೆಗೆ ಮಂಡಿಸಲು ಸದಸ್ಯರು ಕೋರಿದ್ದಲ್ಲಿ ಸಭೆಗೆ ಮಂಡಿಸಬೇಕು ಎಂದು ತಿಳಿಸಿದರು.
- ಪೀಠಗಳ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ರವರು ಖರ್ಚು ವೆಚ್ಚಗಳ ಬಗ್ಗೆ ವಿವರಿಸಿದರು ಹಾಗೂ ಪ್ರತಿಯೊಂದು ಪೀಠಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಲು ಸಭೆಗೆ ಪ್ರಸ್ತಾಪಿಸಿದರು.
- ವಿಶ್ವವಿದ್ಯಾನಿಲಯದ ಯಾವುದೇ ಸಿಬ್ಬಂದಿ ವಿಶ್ವವಿದ್ಯಾನಿಲಯದ ಆದೇಶಗಳನ್ನು ಹಾಗೂ ತಮಗೆ ವಹಿಸುವ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಎಲ್ಲಾ ಸದಸ್ಯರುಗಳು ಮಾನ್ಯ ಕುಲಪತಿಗಳಿಗೆ ತಿಳಿಸಿದರು.
- ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮತ್ತು ಅಧ್ಯಾಪನಕ್ಕೆ ಮೊದಲ ಆದ್ಯತೆ ಇದ್ದು, ಅದರ ಜೊತೆಗೆ ಪೀಠಗಳಿಗೂ ಸಹ ಮಹತ್ವ ನೀಡುವುದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಿರುವುದರಿಂದ, ಪ್ರಸ್ತುತ ಇರುವ ಅಧ್ಯಾಪಕರುಗಳಿಗೆ ಹೆಚ್ಚುವರಿಯಾಗಿ ಪೀಠಗಳ ಜವಾಬ್ದಾರಿಯನ್ನು ನೀಡಲಾಗಿದ್ದು ಅವರುಗಳು ತಮ್ಮ ಕಾರ್ಯದ ಜೊತೆಗೆ ಪೀಠಗಳ ಕಾರ್ಯವೂ ನಿರ್ವಹಿಸುತ್ತಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.
- ಪ್ರಸ್ತುತ ಇರುವ ಅಧ್ಯಯನ ಪೀಠಗಳ ಸಮಿತಿಗಳಿಗೆ ಎಲ್ಲಾ ಮಾನ್ಯ ಸಿಂಡಿಕೇಟ್ ಸದಸ್ಯರುಗಳನ್ನು ಸದಸ್ಯರನ್ನಾಗಿ ಸಮಿತಿಯಲ್ಲಿ ಸೇರಿಸಿ ಈಗಾಗಲೇ ಕ್ರಮಕೈಗೊಂಡಿರುವ ಹಿನ್ನಲೆಯಲ್ಲಿ ಸಿಂಡಿಕೇಟ್ ಸದಸ್ಯರುಗಳು ಸದರಿ ಪೀಠಗಳ ಬಗ್ಗೆ ಹೆಚ್ಚಿನ ಗಮನ ವಹಿಸಿ ಪೀಠಗಳ ಅಭಿವೃದ್ಧಿಗೆ ಸಹಕರಿಸಬೇಕೆಂದು ಮಾನ್ಯ ಕುಲಪತಿಯವರು ತಿಳಿಸಿದರು.
- ಶ್ರೀ ಶ್ರೀನಿವಾಸ್ ಆರ್.ಕೆ. ಇವರು ಪ್ರತಿಯೊಂದು ಅಧ್ಯಯನ ಪೀಠದಲ್ಲಿ ಹೊಸ ವಿಚಾರಗಳನ್ನು ಆವಿಷ್ಕರಿಸಿ ಸಮಾಜಕ್ಕೆ ಒಳಿತಾಗುವ ರೀತಿಯಲ್ಲಿ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.
- ಮಾನ್ಯ ಕುಲಪತಿಯವರು ಪ್ರತಿಯೊಂದು ಅಧ್ಯಯನ ಪೀಠದ ಕಾರ್ಯವೈಖರಿ ಕುರಿತು 15 ದಿನಗಳೊಳಗಾಗಿ ಸಭೆ ಸೇರಿ ಸಮಗ್ರ ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

- ಕೋಕೊನೆಟ್ ಪ್ಲಾಂಟೇಷನ್ ಕೋರ್ಸಿನ ಕುರಿತು ಪಠ್ಯಕ್ರಮವನ್ನು ಮೇಲ್ದರ್ಜೆಗೇರಿಸಲು ಸಿಂಡಿಕೇಟ್ ಸದಸ್ಯರಾದ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್ ರವರು ಸಭೆಯ ಗಮನಕ್ಕೆ ತಂದರು. ಈ ಕುರಿತು ಅಧ್ಯಯನ ಮಂಡಳಿ ಸಭೆ ಕರೆದು ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಅಧ್ಯಯನ ಮಂಡಳಿಗಳು ಪ್ರಸ್ತತ ಪರಿಸ್ಥಿತಿಗೆ ಹೊಂದುವಂತಹ ಪಠ್ಯಕ್ರಮ ರಚಿಸಲು ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಲು ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.
- ಸಿಂಡಿಕೇಟ್ ಸಭೆಗೆ ಮಂಡಿಸಬಹುದಾದ ವಿಷಯವು ಸಿಂಡಿಕೇಟ್ ಸಭೆಗೆ ಸೂಕ್ತವಾದುದ್ದೇ ಅಥವಾ ಇಲ್ಲವೇ ಎಂಬುದರ ಕುರಿತು ತೀರ್ಮಾನ ತೆಗೆದುಕೊಳ್ಳಬೇಕಾದುದ್ದು ಸಿಂಡಿಕೇಟ್ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಯವರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಹಾಗೂ ಚರ್ಚೆಗೆ ಮತ್ತು ನಿರ್ಣಯಕ್ಕೆ ಸೂಕ್ತ ವಿಷಯಗಳಿದ್ದರೆ ಮಾತ್ರ ಕಾರ್ಯಸೂಚಿಗೆ ತರಬಹುದು, ವಿಷಯ ಸ್ಪಷ್ಟನೆ ಇದ್ದರೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಬಹುದೆಂದು ಮಾನ್ಯ ಕುಲಪತಿಯವರು ತಿಳಿಸಿದರು.
- ಶ್ರೀಮತಿ ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಇವರು ವಿಶ್ವವಿದ್ಯಾನಿಲಯದ ಹಾಸ್ಟೆಲ್ ಪ್ರಾರಂಭದ ಕುರಿತು ಸಭೆ ಕರೆಯಲು ಸಭೆಯಲ್ಲಿ ಚರ್ಚಿಸಿದರು. ಈ ಕುರಿತು ಯು.ಜಿ.ಸಿ. ನೀಡಿರುವ ಮಾನದಂಡಗಳ ಅನುಸಾರ ಕ್ರಮಕೈಗೊಳ್ಳುವುದಾಗಿ ಕುಲಸಚಿವರು ಸಭೆಯ ಗಮನಕ್ಕೆ ತಂದರು.
- ಅತಿಥಿ ಉಪನ್ಯಾಸಕರ ವೇತನ ಹೆಚ್ಚಳದ ಕುರಿತು ಚರ್ಚಿಸಿದ ಸಿಂಡಿಕೇಟ್ ಸದಸ್ಯರುಗಳು ಕಛೇರಿ ಆದೇಶ ಸಂಖ್ಯೆ: ತುವಿ:ಸಾ.ವಿ:2020-21/2320, ದಿನಾಂಕ:13.10.2020 ರಂದು ಹೊರಡಿಸಿರುವ NET/SLET/PhD ವಿದ್ಯಾರ್ಹತೆ ಹೊಂದಿರುವ/ಹೊಂದಿಲ್ಲದ ಅತಿಥಿ ಉಪನ್ಯಾಸಕರ ವೇತನಕ್ಕೆ ಹೆಚ್ಚುವರಿಯಾಗಿ ಇನ್ನು ರೂ. 1,000/- (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಹೆಚ್ಚು ಮಾಡಲು ದಿನಾಂಕ 07.11.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಒಮ್ಮತದಿಂದ ತೀರ್ಮಾನಿಸಿ ಶಿಫಾರಸ್ಸು ಮಾಡಲಾಗಿದೆ.

**ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ**

| | | | |
|---|---|---|---|
| 01 | 2020-21.ಸಾ.ಸಿಂ.02 ಸಾ/ಅ.ವಿಭಾಗ-01 | ಶ್ರೀ ಪ್ರವೀಣ್ ಕುಮಾರ್ ಟಿ., ಐಟಿ ಕನ್ಸಲ್‌ಟೆಂಟ್ ಇವರ ಸೇವೆಯನ್ನು ಮುಂದುವರೆಸಲು ಮನವಿ ಸಲ್ಲಿಸಿರುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಶ್ರೀ ಪ್ರವೀಣ್ ಕುಮಾರ್ ಟಿ, ಐಟಿ ಕನ್ಸ್‌ಲ್‌ಟೆಂಟ್ ಇವರನ್ನು ಪ್ರಸ್ತುತ ಇರುವ ವೇತನದಡಿಯಲ್ಲಿಯೇ ಮುಂದಿನ ಹನ್ನೊಂದು ತಿಂಗಳಿಗೆ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| 02 | 2020-21.ಸಾ.ಸಿಂ.02 ಸಾ/ಅ.ವಿಭಾಗ-02 | ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅಧ್ಯಯನ ಪೀಠ ಸ್ಥಾಪನೆಯ ಕುರಿತು | ಸದರಿ ವಿಷಯವನ್ನು ಚರ್ಚೆಯಿಂದ ಕೈಬಿಡಲಾಯಿತು. |
| 03 | 2020-21.ಸಾ.ಸಿಂ.02 ಸಾ/ಅ.ವಿಭಾಗ-03 | ವಿಶೇಷ ಘಟಕ ಯೋಜನಾ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕ ಹಾಗೂ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಸಿಬ್ಬಂದಿಯವರ ಸೇವೆಯನ್ನು ಮುಂದುವರೆಸು ಕುರಿತು. | ವಿಶೇಷ ಘಟಕ ಯೋಜನಾ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕ ಹಾಗೂ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಶ್ರೀ ಲಕ್ಷ್ಮೀ ರಂಗಯ್ಯ ಕೆ.ಎನ್-ಸಂಶೋಧನಾ ಸಹಾಯಕರು ಮತ್ತು ಕುಮಾರಿ ರಂಜನಿ ಕೆ.ಆರ್ ಕ್ಲರ್ಕ್ ಕಂ ಟೈಪಿಸ್ಟ್ ರವರ ಸೇವೆಯನ್ನು ಮುಂದಿನ ಹನ್ನೊಂದು ತಿಂಗಳಿಗೆ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| 04 | 2020-21.ಸಾ.ಸಿಂ.02 ಸಾ/ಅ.ವಿಭಾಗ-04 | ಸ್ನಾತಕ ಪದವಿ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಬಳಕೆ ನೀರನ್ನು ಸರಬರಾಜು ಮಾಡಿರುವ ಹುಂಡಿಗಳ ಮೊತ್ತವನ್ನು ಪಾವತಿಸಿರುವ ಕುರಿತು | ಸ್ನಾತಕ ಪದವಿ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಬಳಕೆ ನೀರನ್ನು ಸರಬರಾಜು ಮಾಡಿರುವ ಹುಂಡಿಗಳ ಮೊತ್ತವನ್ನು ಮೆ. ಗಂಗಮ್ಮ ವಾಟರ್ ಸಪ್ಲೈ, ತುಮಕೂರು ಇವರಿಗೆ ರೂ.56,700.00ಗಳನ್ನು ಪಾವತಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. |

| | | | |
|---|---|---|---|
| 05 | 2020–21.ಸಾ.ಸಿಂ.02 ಸಾ/ಅ.ವಿಭಾಗ–05 | ವಿಶ್ವವಿದ್ಯಾನಿಲಯಕ್ಕೆ BSNL ಸಂಸ್ಥೆಯಿಂದ Internet Leased line ನ ನವೀಕರಣ ಸಂಬಂಧದ ಕುರಿತು | ವಿಶ್ವವಿದ್ಯಾನಿಲಯಕ್ಕೆ BSNL ಸಂಸ್ಥೆಯಿಂದ Internet Leased line ನ ಸೌಲಭ್ಯವನ್ನು ನವೀಕರಿಸಿಕೊಳ್ಳಲು ಸಭೆಯು ಅನುಮೋದಿಸಿತು. |
| | | **ಶೈಕ್ಷಣಿಕ ವಿಭಾಗ** | |
| 06 | 2020–21.ಸಾ.ಸಿಂ.02 ಶೈ.ವಿಭಾಗ–01 | ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಸೀಟುಗಳನ್ನು ಕಾಯ್ದಿರಿಸುವ ಕುರಿತು. | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯಲ್ಲಿ ಒಂದು ಸೀಟನ್ನು (Over and above) ಕಾಯ್ದಿರಿಸುವ ವಿಷಯದ ಸಂಬಂಧ ಸಭೆಯು, ಮಂಗಳೂರು ವಿಶ್ವವಿದ್ಯಾನಿಲಯವು ಸ್ಕೌಟ್ಸ್ ಅಂಡ್ ಗೈಡ್ಸ್ ಸಂಬಂಧ ಹೊರಡಿಸಿರುವ ಸುತ್ತೋಲೆ ಸಂಖ್ಯೆ:MU/ACC/CR.6/AP/2015-16/A2 date 01.09.2015 ರಲ್ಲಿ ನಿಗದಿಪಡಿಸಿರುವ ಅರ್ಹತಾ ನಿಯಮಗಳನ್ನು ಪಾಲಿಸಿ ಪ್ರವೇಶಾತಿಯಲ್ಲಿ ಒಂದು ಸೀಟನ್ನು (Over and above) ನೀಡಲು ಕ್ರಮ ಕೈಗೊಳ್ಳಲು ತೀರ್ಮಾನಿಸಿತು. |
| 07 | 2020–21.ಸಾ.ಸಿಂ.02 ಶೈ.ವಿಭಾಗ–02 | ಬಿ.ಬಿ.ಎಂ ಪದವಿಯ ಹೆಸರನ್ನು ಬಿ.ಬಿ.ಎ ಎಂದು ಬದಲಾಯಿಸುವ ಕುರಿತು | ಯು.ಜಿ.ಸಿ ನಿಯಮಾನುಸಾರ ಬಿ.ಬಿ.ಎಂ ಪದವಿಯ ಹೆಸರನ್ನು ಬಿ.ಬಿ.ಎ ಎಂದು ಬದಲಾಯಿಸುವ ವಿಷಯದ ಕುರಿತಾಗಿ ಅನುಮೋದನೆ ನೀಡಿರುವ ವಿದ್ಯಾವಿಷಯಕ ಪರಿಷತ್ ಸದಸ್ಯರ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | **ಸಿಬ್ಬಂದಿ ವಿಭಾಗ** | |
| 08 | 2020–21.ಸಾ.ಸಿಂ–02 ಸಿಬ್ಬಂದಿ ವಿಭಾಗ–01 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಉಪ ಪ್ರಾಂಶುಪಾಲರ ನೇಮಕಾತಿ ಆದೇಶವನ್ನು ಸ್ಥಿರೀಕರಿಸುವ ಕುರಿತು | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಉಪ ಪ್ರಾಂಶುಪಾಲರಾಗಿ ಡಾ.ಶೇತ್ ಪ್ರಕಾಶ್ ಇವರನ್ನು ನೇಮಕ ಮಾಡಿ ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 09 | 2020–21.ಸಾ.ಸಿಂ–02 ಸಿಬ್ಬಂದಿ ವಿಭಾಗ–02 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿಗೆ ಅವಕಾಶವಿಲ್ಲದ ತಾಂತ್ರಿಕ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಹುದ್ದೆಗಳ ಉನ್ನತೀಕರಣದ ಸಂಬಂಧ ರಚಿಸಿರುವ ಪರಿನಿಯಮಾವಳಿಯ ಕುರಿತು. | ಸದರಿ ಪರಿನಿಯಮವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಭೆಯು ತೀರ್ಮಾನಿಸಿತು. |
| | | **ಖರೀದಿ ಕೋಶ** | |
| 10 | 2020–21.ಸಾ.ಸಿಂ.02 ಖರೀದಿ ಕೋಶ–01 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಮಾಡಿರುವ ಮೆ. ಸುಧಾ ಟ್ರೇಡರ್ಸ್, ಶಿವಮೊಗ್ಗ ಮತ್ತು ಮೆ. ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್, ಶಿವಮೊಗ್ಗ ಈ ಎರಡು ಸಂಸ್ಥೆಗಳಿಗೆ ಹಣ ಪಾವತಿಸಿರುವ ಕುರಿತು | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಮಾಡಿರುವ ಮೆ. ಸುಧಾ ಟ್ರೇಡರ್ಸ್, ಶಿವಮೊಗ್ಗ ಮತ್ತು ಮೆ. ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್, ಶಿವಮೊಗ್ಗ ಈ ಎರಡು ಸಂಸ್ಥೆಗಳಿಗೆ ಹಣ ಪಾವತಿಸಿರುವ ಸಂಬಂಧ ಸದಸ್ಯರುಗಳು ಕೇಳಿದ್ದ ಎಲ್ಲಾ ಮಾಹಿತಿಯನ್ನು ನೀಡಿದ ನಂತರ ಸಭೆಯು ಸುದೀರ್ಘವಾಗಿ ಚರ್ಚಿಸಿ |

| | | | |
|---|---|---|---|
| | | | ಅಂತಿಮವಾಗಿ ಎರಡು ಸಂಸ್ಥೆಗಳಿಗೆ ರೂ.2,07,396.00 ಗಳನ್ನು ಪಾವತಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸ್ಥಿರೀಕರಿಸಿತು. |
| 11 | 2020-21.ಸಾ.ಸಿಂ.02 ಖರೀದಿ ಕೋಶ-02 | ಮೆ. ಜೆ ಪಿ ಅಕ್ವಾ ಇಂಡಸ್ಟ್ರೀಸ್ ಇವರು ಸರಬರಾಜು ಮಾಡಿರುವ ಕುಡಿಯುವ ನೀರಿನ ಮೊತ್ತ ರೂ.3,33,376.00 ಗಳ ಪಾವತಿಯ ಕುರಿತು. | ಮೆ. ಜೆ ಪಿ ಅಕ್ವಾ ಇಂಡಸ್ಟ್ರೀಸ್ ಇವರು ಸರಬರಾಜು ಮಾಡಿರುವ ಕುಡಿಯುವ ನೀರಿನ ಮೊತ್ತ ರೂ. 3,33,376.00 ಗಳ ಪಾವತಿಸುವ ಕುರಿತು ಚರ್ಚಿಸಿದ ಸಭೆಯು ಸದರಿ ಮೊತ್ತವನ್ನು ಪಾವತಿಸುವ ಕುರಿತು ನಿಯಮಾನುಸಾರ ಕ್ರಮಕೈಗೊಳ್ಳಲು ನಿರ್ಣಯಿಸಿತು. |
| | | ಇಂಜಿನಿಯರಿಂಗ್ ವಿಭಾಗ | |
| 12 | 2020-21.ಸಾ.ಸಿಂ.02 ಇಂ.ವಿಭಾಗ-01 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸ್ವಚ್ಛತಾ ಕಾರ್ಯ ನಿರ್ವಹಣೆಯ ಸೇವೆಯನ್ನು ಒದಗಿಸುತ್ತಿರುವ ಮೆ. ಮಾರ್ಸ್ ಸೆಕ್ಯೂರಿಟಿ ಅಂಡ್ ಅಲೈಡ್ ಸರ್ವೀಸಸ್, ಬೆಂಗಳೂರು ರವರ ಟೆಂಡರ್ ಅವಧಿಯನ್ನು ವಿಸ್ತರಿಸುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ವಿಷಯವನ್ನು ಟೆಂಡರ್ ಸಮಿತಿಯ ಗಮನಕ್ಕೆ ತರುವುದು ಹಾಗೂ ಟೆಂಡರ್‌ದಾರರ ಕಾರ್ಯವೈಖರಿಯನ್ನು ಪರಿಶೀಲಿಸಿ, ಟೆಂಡರ್ ಅವಧಿಯನ್ನು ವಿಸ್ತರಿಸಬೇಕೇ ಅಥವಾ ಹೊಸ ಟೆಂಡರ್ ಆಹ್ವಾನಿಸಬೇಕೇ ಎಂಬುದರ ಕುರಿತು ವರದಿ ಪಡೆದು, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 13 | 2020-21.ಸಾ.ಸಿಂ.02 ಇಂ.ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುತ್ತಿರುವ ಮೆ. ಮಾರ್ಸ್ ಸೆಕ್ಯೂರಿಟಿ ಅಂಡ್ ಅಲೈಟ್ ಸರ್ವೀಸಸ್, ಬೆಂಗಳೂರು ರವರ ಟೆಂಡರ್ ಅವಧಿಯನ್ನು ವಿಸ್ತರಿಸುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ವಿಷಯವನ್ನು ಟೆಂಡರ್ ಸಮಿತಿಯ ಗಮನಕ್ಕೆ ತರುವುದು ಹಾಗೂ ಟೆಂಡರ್‌ದಾರರ ಕಾರ್ಯವೈಖರಿಯನ್ನು ಪರಿಶೀಲಿಸಿ, ಟೆಂಡರ್ ಅವಧಿಯನ್ನು ವಿಸ್ತರಿಸಬೇಕೇ ಅಥವಾ ಹೊಸ ಟೆಂಡರ್ ಆಹ್ವಾನಿಸಬೇಕೇ ಎಂಬುದರ ಕುರಿತು ವರದಿ ಪಡೆದು, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 14 | 2020-21.ಸಾ.ಸಿಂ.02 ಇಂ.ವಿಭಾಗ-03 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸೇವೆ ನಿರ್ವಹಣೆಯ ಸೇವೆಯನ್ನು ಒದಗಿಸುತ್ತಿರುವ ಮೆ. ಅಪ್ಪು ಡಿಟೆಕ್ಟೀವ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು ರವರ ಟೆಂಡರ್ ಅವಧಿಯನ್ನು ವಿಸ್ತರಿಸುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ವಿಷಯವನ್ನು ಟೆಂಡರ್ ಸಮಿತಿಯ ಗಮನಕ್ಕೆ ತರುವುದು ಹಾಗೂ ಟೆಂಡರ್‌ದಾರರ ಕಾರ್ಯವೈಖರಿಯನ್ನು ಪರಿಶೀಲಿಸಿ, ಟೆಂಡರ್ ಅವಧಿಯನ್ನು ವಿಸ್ತರಿಸಬೇಕೇ ಅಥವಾ ಹೊಸ ಟೆಂಡರ್ ಆಹ್ವಾನಿಸಬೇಕೇ ಎಂಬುದರ ಕುರಿತು ವರದಿ ಪಡೆದು, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| | | **ಪಿಹೆಚ್.ಡಿ ವಿಭಾಗ** | |
| 15 | 2020-21.ಸಾ.ಸಿಂ.02 ಪಿಹೆಚ್.ಡಿ-01 | ಸಕಾಲದಲ್ಲಿ ಪ್ರಗತಿ ವರದಿಗಳನ್ನು ಸಲ್ಲಿಸದೇ ಇರುವ ಸಂಶೋಧನಾರ್ಥಿಗಳ ಕುರಿತು | ಈ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸಂಶೋಧನಾರ್ಥಿಗಳ ಮನವಿ ಹಾಗೂ ಪಿಹೆಚ್.ಡಿ. ಮಾರ್ಗದರ್ಶಕರ ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು. |
| | | **ಸಿಬ್ಬಂದಿ ವಿಭಾಗ** | |
| 16 | 2020-21.ಸಾ.ಸಿಂ-02 ಸಿಬ್ಬಂದಿ ವಿಭಾಗ-03 | ಡಾ. ಗಿರೀಶ್ ಕೆ.ಎಸ್., ಪ್ರಾಧ್ಯಾಪಕರು ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಯಡಿಯಲ್ಲಿ ವರ್ಗಾವಣೆ ಕೋರಿ ಮನವಿ ಸಲ್ಲಿಸಿರುವ ಕುರಿತು. | ಡಾ. ಗಿರೀಶ್ ಕೆ.ಎಸ್., ಪ್ರಾಧ್ಯಾಪಕರು ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಕೋರಿರುವ ಮನವಿಯ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸದರಿಯವರಿಗೆ ನಿರಕ್ಷೇಪಣಾ ಪತ್ರ ನೀಡಲು ಸಭೆಯು ಒಪ್ಪಿರುವುದಿಲ್ಲ. |
| | | **ಇಂಜಿನಿಯರಿಂಗ್ ವಿಭಾಗ** | |
| 17 | 2020-21.ಸಾ.ಸಿಂ.02 ಇಂ.ವಿಭಾಗ-03 | ತುಮಕೂರು ವಿಶ್ವವಿದ್ಯಾನಿಯದ ವಿಜ್ಞಾನ ಕಾಲೇಜಿನ ಆವರಣದಲ್ಲಿ ರೂಸಾ ಅನುದಾನದಡಿಯಲ್ಲಿ Laboratory Block ನಿರ್ಮಾಣ ಮಾಡುವ ಕಾಮಗಾರಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ | ತುಮಕೂರು ವಿಶ್ವವಿದ್ಯಾನಿಯದ ವಿಜ್ಞಾನ ಕಾಲೇಜಿನ ಆವರಣದಲ್ಲಿ ರೂಸಾ ಅನುದಾನದಡಿಯಲ್ಲಿ Laboratory Block ನಿರ್ಮಾಣ ಮಾಡುವ ಕಾಮಗಾರಿಯ ಕುರಿತು ಅಲ್ಪಾವಧಿ ಟೆಂಡರ್ ಆಹ್ವಾನಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. ಹಾಗೂ ಇದರಿಂದ ವಿದ್ಯಾರ್ಥಿಗಳಿಗೆ ಆದಷ್ಟು ಬೇಗ ಅನುಕೂಲವಾಗಬೇಕೆಂದು ಶ್ರೀ ಸುನಿಲ್ ಪ್ರಸಾದ್ ಟಿ.ಎಸ್. ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |
| | | **ಶೈಕ್ಷಣಿಕ ವಿಭಾಗ** | |
| 18 | 2020-21.ಸಾ.ಸಿಂ.02 ಶೈ.ವಿಭಾಗ-03 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ 2020-21ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಯಲ್ಲಿ ರೋಸ್ಟರ್ ನಿಯಮ ಉಲ್ಲಂಘನೆ ಮಾಡಿದೆ ಎನ್ನಲಾದ ದೂರಿನ ಕುರಿತು. | ಸದರಿ ವರದಿಯ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಪ್ರವೇಶಾತಿಯಲ್ಲಿ ಅನ್ಯಾಯವಾಗಿದೆ ಎಂದು ಯಾವುದೇ ಒಬ್ಬ ವಿದ್ಯಾರ್ಥಿಯು ದೂರು ನೀಡಿರುವ ಕುರಿತು ಮಾಹಿತಿ ಇದ್ದಲ್ಲಿ ಮುಂದಿನ ಸಿಂಡಿಕೇಟ್ ಸಭೆಯ ಗಮನಕ್ಕೆ ತರುವುದು. ಹಾಗೂ ವಿಶ್ವವಿದ್ಯಾನಿಲಯದ ಘನತೆಗೆ ಚ್ಯುತಿ/ಧಕ್ಕೆ ತರುವಂತಹ ಕೆಲಸ ಮಾಡಿರುವವರ ಮತ್ತು ದಿನಪತ್ರಿಕೆಗೆ ಮಾಹಿತಿ ನೀಡಿರುವಂತಹವರ ವಿರುದ್ಧ ಸೂಕ್ತ ತನಿಖೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ಕೆಲವು ಸದಸ್ಯರು ತಿಳಿಸಿದರು. ನಂತರ ಕೈಗೊಂಡ ಕ್ರಮವನ್ನು ಮುಂದಿನ ಸಭೆಗೆ ಮಂಡಿಸಲು ಒಮ್ಮತದಿಂದ ತೀರ್ಮಾನಿಸಿತು. |

| | | | |
|---|---|---|---|
| **ಕಾನೂನು ಕೋಶ** | | | |
| 19 | 2020-21.ಸಾ.ಸಿಂ.02 ಕಾ.ಕೋ-01 | ವಿಶ್ವವಿದ್ಯಾನಿಲಯದ ಕಾನೂನಾತ್ಮಕ ವಿಷಯಗಳನ್ನು ನಿರ್ವಹಿಸಲು ಮತ್ತು ನ್ಯಾಯಾಲಯದ ಪ್ರಕರಣಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ವಕೀಲರ ಪಟ್ಟಿಯನ್ನು ಅನುಮೋದಿಸುವ ಕುರಿತು. | ಸದರಿ ವಿಷಯದ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ನಿರ್ಣಯಿಸಲು ತೀರ್ಮಾನಿಸಲಾಯಿತು. |
| **ಶೈಕ್ಷಣಿಕ ವಿಭಾಗ** | | | |
| 20 | 2020-21.ಸಾ.ಸಿಂ.02 ಶೈ.ವಿಭಾಗ-04 | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ ಪದವಿಯ ವಿನಿಯಮವನ್ನು ಅನುಮೋದಿಸುವ ಕುರಿತು | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರೊ. ಬಿ.ಟಿ. ಸಂಪತ್‌ಕುಮಾರ್ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರ ಅಧ್ಯಕ್ಷತೆಯ ಸಮಿತಿಯು ಸಿದ್ಧಪಡಿಸಿರುವ ವಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಸದರಿ ವಿನಿಯಮದಲ್ಲಿರುವ ಪ್ರವೇಶಾತಿಯ ಅರ್ಹತೆಗೆ ನಿಗದಿಪಡಿಸಿರುವ ಶೇಕಡ 50% ರಷ್ಟು ಅಂಕವನ್ನು ಶೇಕಡ 45% ಕ್ಕೆ ನಿಗದಿಪಡಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು. |
| 21 | 2020-21.ಸಾ.ಸಿಂ.02 ಶೈ.ವಿಭಾಗ-05 | ಬಿ.ವೋಕ್ ಕೋರ್ಸಿನ ತಿದ್ದುಪಡಿ ವಿನಿಯಮದ ಕುರಿತು | ಸರ್ಕಾರದ ಸೂಚನೆಯಂತೆ ಬಿ.ವೋಕ್ ಕೋರ್ಸಿನ ತಿದ್ದುಪಡಿಗೆ ಸಂಬಂಧಿಸಿದಂತೆ, 1)ಭಾರತೀಯ ಸಂವಿಧಾನ ಹಾಗೂ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ವಿನಿಯಮದಲ್ಲಿ ಸೇರ್ಪಡೆಗೊಳಿಸಲಾಗಿದೆ.<br>2)ವಿನಿಯಮದಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲಾ ಅಂಶಗಳು National Skills Qualification Framework ಹಾಗೂ ಬಿ.ವೋಕ್ ವ್ಯಾಸಂಗ ಕ್ರಮದ ಯು.ಜಿ.ಸಿ. ಮಾರ್ಗಸೂಚಿಗಳಿಗೆ ಅನುಗುಣವಾಗಿವೆ ಎಂದು ದೃಢೀಕರಿಸಿರುವ ಉದ್ದೇಶಿತ ತಿದ್ದುಪಡಿಗಳನ್ನು ಅಧ್ಯಯನ ಮಂಡಳಿಯು ಸಿದ್ಧಪಡಿಸಿದ್ದು, ಸದರಿ ತಿದ್ದುಪಡಿ ವಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಒಪ್ಪಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು. |
| **ಸಿಬ್ಬಂದಿ ವಿಭಾಗ** | | | |
| 22 | 2020-21.ಸಾ.ಸಿಂ-02 ಸಿಬ್ಬಂದಿ ವಿಭಾಗ-04 | ವಿಶ್ವವಿದ್ಯಾನಿಲಯದ ವಿವಿಧ ವೃಂದಗಳಲ್ಲಿ ಸ್ಥಾನಪನ್ನಾ ಪದೋನ್ನತಿ ಹೊಂದಿರುವ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ವೇತನ ನಿಗದಿಪಡಿಸಿ ಪಾವತಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು. | ವಿಶ್ವವಿದ್ಯಾನಿಲಯದ ವಿವಿಧ ವೃಂದಗಳಲ್ಲಿ ಸ್ಥಾನಪನ್ನಾ ಪದೋನ್ನತಿ ಹೊಂದಿರುವ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ವೇತನ ನಿಗದಿಪಡಿಸಿ ಪಾವತಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. |

| | | | |
|---|---|---|---|
| 23 | 2020-21.ಸಾ.ಸಿಂ-02<br>ಸಿಬ್ಬಂದಿ ವಿಭಾಗ-04 | ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಕೆಲವು ವೃಂದದ ಬೋಧಕೇತರ ಹುದ್ದೆಗಳಿಗೆ ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯಲ್ಲಿ ಅವಕಾಶವಿರುವಂತೆ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಪ್ರಸ್ತುತ ಪದೋನ್ನತಿ ಆಗದ ಸಿಬ್ಬಂದಿಗಳಿಂದ ಸಲಹೆ ಆಹ್ವಾನಿಸುವುದು. ನಂತರ ಇಲಾಖಾ ಪರೀಕ್ಷೆಗಳನ್ನು ನಡೆಸಿ, ಅರ್ಹವಿರುವವರಿಗೆ ತ್ವರಿತವಾಗಿ ಪದೋನ್ನತಿ ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |

| ಹೆಸರು/ಹುದ್ದೆ | ಸಹಿ | ಹೆಸರು/ಹುದ್ದೆ | ಸಹಿ |
|---|---|---|---|
| ಶ್ರೀ ಶ್ರೀನಿವಾಸ ಆರ್.ಕೆ. | | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | |
| ಪ್ರೊ. ಡಿ.ಎಸ್. ಮುನಿಂದ್ರಕುಮಾರ್, | | ಶ್ರೀ ಪ್ರಸನ್ನಕುಮಾರ್ | |
| ಡಾ. ಲೀಲಾವತಿ ಟಿ.ಆರ್. | | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ | |
| ಡಾ. ಬಾಲಪ್ಪ, | | ಶ್ರೀಮತಿ ಎಂ.ಎಸ್. ಭವ್ಯ, | |
| ಡಾ. ಪಿ. ರಾಜಾರೆಡ್ಡಿ, | | ಶ್ರೀ ರಾಜು | |
| ಪ್ರೊ. ಪಿ. ಪರಮಶಿವಯ್ಯ, | | ಶ್ರೀ ಟಿ.ಡಿ. ವಿನಯ್, | |
| ಕುಲಸಚಿವರು (ಪರೀಕ್ಷಾಂಗ) | | ಹಣಕಾಸು ಅಧಿಕಾರಿಗಳು | |
| | | ಪ್ರೊ. ಬಿ.ಟಿ. ಸಂಪತ್ ಕುಮಾರ್ | |

ಕುಲಸಚಿವರು

ಮಾನ್ಯ ಕುಲಪತಿಗಳು